**ಎಚ್ಐವಿ/ಏಡ್ಸ್ ನಂತಹ ಸವಾಲುಗಳನ್ನು ಎದುರಿಸಲು ಸಜ್ಜಾಗುವಂತೆ ಮಾಧ್ಯಮಗಳಿಗೆ**
**ಶ್ರೀ ಜೈಪಾಲ್ ರೆಡ್ಡಿ ಆಗ್ರಹ**

ನವದೆಹಲಿ, ಅಕ್ಟೋಬರ್ 28, 2005

ಕೇಂದ್ರ ವಾರ್ತಾ ಮತ್ತು ಪ್ರಸಾರ ಹಾಗೂ ಸಂಸ್ಕೃತಿ ಸಚಿವ ಶ್ರೀ ಎಸ್. ಜೈಪಾಲ ರೆಡ್ಡಿ ಅವರು ಎಚ್.ಐ.ವಿ ಮತ್ತು ಏಡ್ಸ್ ಸವಾಲುಗಳನ್ನು ಎದುರಿಸಲು ಸಜ್ಜಾಗುವಂತೆ ಮಾಧ್ಯಮಗಳಿಗೆ ಆಗ್ರಹಿಸಿದ್ದಾರೆ. ಸಚಿವರು, ನವದೆಹಲಿಯಲ್ಲಿ ನಡೆದ ಎಚ್.ಐ.ವಿ./ಏಡ್ಸ್ ಉಪಕ್ರಮ ಕುರಿತ ಭಾರತೀಯ ಮಾಧ್ಯಮ ಮುಖಂಡರ ಸಭೆಯಲ್ಲಿ ಪ್ರಧಾನ ಭಾಷಣ ಮಾಡುತ್ತಿದ್ದರು. ಎಚ್.ಐ.ವಿ./ಏಡ್ಸ್ ರೋಗವನ್ನು ಸಮರ್ಪಕವಾಗಿ ಹತ್ತಿಕ್ಕಲು ಮಾಧ್ಯಮಗಳ ಮುಂದಾಳತ್ವ ಬಹು ಮುಖ್ಯವಾದುದು. ಸಾರ್ವಜನಿಕರಿಗೆ ಯಾವುದು ಉತ್ತಮವಾದದ್ದು ಎಂಬುದನ್ನು ತಿಳಿಸುವ ಪ್ರಕ್ರಿಯೆಯಲ್ಲಿ ಹಾಗೂ ಸಾಮಾಜಿಕ ಬದಲಾವಣೆ ಪ್ರಕ್ರಿಯೆಯಲ್ಲಿ ಮಾಧ್ಯಮಗಳು ಮಹತ್ವದ ಪಾತ್ರ ವಹಿಸಬೇಕು ಎಂದರು. ಈ ರೋಗಗಳ ಕುರಿತ ತಿಳಿವಳಿಕೆ ಹಾಗೂ ಅರಿವಿನಿಂದ ಮಾತ್ರ ರೋಗ ಹರಡುವಿಕೆಯನ್ನು ನಿಯಂತ್ರಿಸಲು ಸಾಧ್ಯ. ಪ್ರಭಾವಿ ಮಾಧ್ಯಮ ಕ್ಷೇತ್ರವು ಈ ಕುರಿತಂತೆ ಮಾಹಿತಿಗಳನ್ನು ರವಾನಿಸುವ ಪ್ರಕ್ರಿಯೆಯಲ್ಲಿ ನೂತನ ಆಯಾಮಗಳನ್ನು ಒದಗಿಸುತ್ತಿವೆ ಎಂದರು. ಸಮುದಾಯ ರೇಡಿಯೋ, ನೂತನ ಮಾಧ್ಯಮ ಸಾಧನಗಳು, ಅಂತರ್ಜಾಲ, ಎಸ್.ಎಂ.ಎಸ್. ಮುಂತಾದವುಗಳ ಸೇವೆಯನ್ನು ಬಳಸಿಕೊಂಡು ಯುವ ಜನಾಂಗಕ್ಕೆ ಈ ರೋಗದ ಬಗ್ಗೆ ಅರಿವು ಮೂಡಿಸಲು ಸಾಧ್ಯ ಎಂದರು.

ಏಡ್ಸ್ ರೋಗದ ವಿರುದ್ಧದ ರಾಷ್ಟ್ರೀಯ ಹೋರಾಟದಲ್ಲಿ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಹಾಗೂ ಪ್ರಸಾರ ಭಾರತಿ ಮುಂಚೂಣಿಯಲ್ಲಿದೆ ಎಂದರು.

******

ಅದ:ಪಚ:ಪಿ.ಜಿ.ಪಿ.ಟಿ.ಎಂ.ಎಸ್: ಬೆಂ:14:30 27-10-2005